# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1411**
ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಡಿ.ಟಿ ಶ್ರೀನಿವಾಸ್
ಉತ್ತರಿಸಬೇಕಾದ ದಿನಾಂಕ : 22.08.2025
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 2025-26ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ 6ನೇ ತರಗತಿ ಪ್ರವೇಶಕ್ಕೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಸತಿ/ಶಾಲಾವಾರು ಮಾಹಿತಿ ನೀಡುವುದು) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸಂಘದ ಅಡಿಯಲ್ಲಿ 2025-26ನೇ ಸಾಲಿಗೆ 822 ವಸತಿ ಶಾಲೆಗಳ 6 ನೇ ತರಗತಿ ಪ್ರವೇಶಕ್ಕೆ 41,790 ಸೀಟುಗಳು ಲಭ್ಯವಿರುತ್ತದೆ.ವಸತಿ ಶಾಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಈ ಪೈಕಿ ಇದುವರೆಗೂ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; (ವಸತಿ/ಶಾಲಾವಾರು ಮತ್ತು ಮೀಸಲಾತಿವಾರು ಮಾಹಿತಿ ನೀಡುವುದು ) | ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ 2025-26ನೇ ಸಾಲಿಗೆ 6ನೇ ತರಗತಿ ಪ್ರವೇಶಾತಿಗೆ ಒಟ್ಟು 41,500 ಸೀಟುಗಳು ಲಭ್ಯವಿರುತ್ತದೆ. ಆದೇಶ ಸಂಖ್ಯೆ: ಸಕಇ 94 ಮೊದೇಶಾ 2020, ದಿನಾಂಕ:19.06.2021 ಮತ್ತು ದಿನಾಂಕ:12.11.2021 ಮತ್ತು ಸಕಇ 399 ಮೊದೇಶಾ 2022,ದಿನಾಂಕ:15.03.2024 ರಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳ 6ನೇ ತರಗತಿಯ ಪ್ರವೇಶಾತಿಗಾಗಿ ಪ್ರವೇಶ ಪರೀಕ್ಷೆ ಮತ್ತು ಸೀಟು ಹಂಚಿಕೆ ಕಾರ್ಯವನ್ನು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (KEA) ವಹಿಸಲಾಗಿದ್ದು, ಕರ್ನಾಟಕ ಪರೀಕ್ಷಾ ಪ್ರಾಧಿಕಾರದವರು ಅರ್ಜಿ ಆಹ್ವಾನಿಸಿ, ಪ್ರವೇಶ ಪರೀಕ್ಷೆ ನಡೆಸಿ, ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು (ಮೆರಿಟ್), ಅನ್ವಯಿಸುವ ಮೀಸಲಾತಿ ಮತ್ತು ಅವರು ನಮೂದಿಸಿರುವ ವಸತಿ ಶಾಲಾ ಆದ್ಯತೆ ಪರಿಗಣಿಸಿ Computerized auto selection ಮೂಲಕ ಸಾಮಾನ್ಯ ಸೀಟು ಹಂಚಿಕೆಗೆ ಲಭ್ಯವಿದ್ದ ಒಟ್ಟು 20,750 ಸೀಟುಗಳನ್ನು 4 ಸುತ್ತುಗಳಲ್ಲಿ ಹಂಚಿಕೆ ಮಾಡಲಾಗಿದೆ. ಇದಲ್ಲದೇ ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ 20,750 ಸೀಟುಗಳು ಹಂಚಿಕೆಗೆ ಲಭ್ಯವಿದ್ದು, ಆನ್ ಲೈನ್ |

2—

| | | |
|---|---|---|
| | | ಮೂಲಕ ಅರ್ಜಿ ಸಲ್ಲಿಸಿದ್ದ ವಿಶೇಷ ವರ್ಗದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆ ಇಲ್ಲದೇ ಸೀಟು ಹಂಚಿಕೆ ಮಾಡಲಾಗಿದೆ.<br>ಆದರಂತೆ 2025-26ನೇ ಸಾಲಿಗೆ 6ನೇ ತರಗತಿಗೆ ಒಟ್ಟು 41,500 ಸೀಟುಗಳಲ್ಲಿ 36,344 ಸೀಟುಗಳು ಭರ್ತಿಯಾಗಿದ್ದು, ಸೀಟುಗಳು ಭರ್ತಿಯಾಗದೇ ಖಾಲಿ ಉಳಿದಿರುವ 5,156 ಸೀಟುಗಳನ್ನು ಜಿಲ್ಲಾ ಹಂತದಲ್ಲಿ ಸಮಿತಿ ರಚಿಸಿ ಕಂದಾಯ ಉಪವಿಭಾಗಾಧಿಕಾರಿಗಳ ನೇತೃತ್ವದಲ್ಲಿ ಭರ್ತಿ ಮಾಡುವಂತೆ ಸೂಚಿಸಲಾಗಿದೆ.<br>ಈ ರೀತಿಯಾಗಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾಹಂತದಲ್ಲಿ ಕ್ರಮವಹಿಸುತ್ತಿದ್ದು ಪ್ರಸ್ತುತ 36,973 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ವಸತಿ ಶಾಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಇ) | ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ನಿಗದಿಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ದಾಖಲಾದ ಸಂಖ್ಯೆ ಎಷ್ಟು;(ಶಾಲಾವಾರು ಮಾಹಿತಿ ನೀಡುವುದು) | ಪ್ರತಿ ವರ್ಷ ಲಭ್ಯವಾಗುವ ಒಟ್ಟು ಸೀಟುಗಳಲ್ಲಿ ಶೇ.50 ಸೀಟುಗಳನ್ನು ಪ್ರವೇಶ ಪರೀಕ್ಷೆಯ ಮೂಲಕ ಹಾಗೂ ಶೇ.50 ರಷ್ಟು ಸೀಟುಗಳನ್ನು ವಿಶೇಷ ವರ್ಗದಡಿ ಬರುವ ಇತರೆ ವರ್ಗಗಳಿಗೆ ಶೇ.10 ರಂತೆ ನಿಗಧಿಪಡಿಸಿದೆ. ಈ ವರ್ಗಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಕಇ 399 ಮೊದೇಶಾ 2022, ದಿನಾಂಕ:15.03.2024 ರಲ್ಲಿ ನಿರ್ದಿಷ್ಟವಾಗಿ ವಿಶೇಷ ವರ್ಗಗಳಿಗೆ ಶೇ.10 ರಂತೆ ಮೀಸಲಾತಿಯನ್ನು ನಿಗಧಿಪಡಿಸಿದೆ. ಈ ರೀತಿಯಾಗಿ ನಿಗಧಿಪಡಿಸಿದ ಶೇ.10 ರ ಮೀಸಲಾತಿಯನ್ನು ಅಲೆಮಾರಿ ಗುರುತಿಸಿರುವ ಅಲೆಮಾರಿ/ಅರೆ ಅಲೆಮಾರಿ/ಸೂಕ್ಷ್ಮ-ಅತೀ ಸೂಕ್ಷ್ಮ ಸಮುದಾಯದ/ಸೈನಿಕರು ಮತ್ತು ಮಾಜಿ ಸೈನಿಕರು/ಸರ್ಕಾರಿ ಯೋಜನೆಗಳಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳಿಗೆ ಮೀಸಲಾತಿ ನೀಡಿ ಸೀಟು ಹಂಚಿಕೆ ಕ್ರಮವಹಿಸಲಾಗಿದೆ.<br>ವಸತಿ ಶಾಲೆಗಳಿಗೆ ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಮಕ್ಕಳಿಗೆ ಮೀಸಲಾದ ಶೇ.10 ರಷ್ಟು ಸೀಟುಗಳಿಗಿಂತ |

3—

| | | |
|---|---|---|
| ಈ) | ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ದಾಖಲಾಗದೆ ಉಳಿಕೆಯಾಗಿರುವ ಸೀಟುಗಳನ್ನು ಅಲೆಮಾರಿ ಜನಾಂಗದವರಿಗೆ ನೀಡಲು ಅವಕಾಶವಿದೆಯೇ; ಇಲ್ಲದೇ ಇದ್ದಲ್ಲಿ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ವಂಚಿತರಾಗುವುದಿಲ್ಲವೇ; ಇದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಹೆಚ್ಚುವರಿಯಾಗಿ ಅರ್ಜಿ ಸಲ್ಲಿಸಿದ್ದಲ್ಲಿ, ಒಟ್ಟಾರೆ ರಾಜ್ಯದ ಸೀಟುಗಳ ಅನುಪಾತದೊಂದಿಗೆ ಸಮೀಕರಣ ಮಾಡಿ, ರಾಜ್ಯದಲ್ಲಿ ಪ್ರಸ್ತುತ ಭರ್ತಿಯಾಗದೇ ಲಭ್ಯವಿರುವ ಎಲ್ಲಾ ಸೀಟುಗಳನ್ನು ಜಿಲ್ಲಾವಾರು ಮರುಹಂಚಿಕೆ ಮಾಡಿ ಅಲೆಮಾರಿ ಮಕ್ಕಳಿಗೆ ಪ್ರಥಮ ಆದ್ಯತೆಯ ಮೇರೆಗೆ ಶಾಲೆಗೆ ದಾಖಲು ಮಾಡಿಕೊಳ್ಳಲು ಆದೇಶಿಸಲಾಗಿದೆ.<br>ಸಂಘದಲ್ಲಿ ಈಗಾಗಲೇ ಅಲೆಮಾರಿ ಅರೆ ಅಲೆಮಾರಿ ವಿದ್ಯಾರ್ಥಿಗಳಿಗೆ 3 ಜಿಲ್ಲೆಗಳಲ್ಲಿ 3 ಅಲೆಮಾರಿ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಅದರಂತೆ 2025-26ನೇ ಸಾಲಿಗೆ ಆಯವ್ಯಯ ಘೋಷಣೆಯಂತೆ ಅಲೆಮಾರಿ/ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ತಲಾ ಒಂದರಂತೆ ಡಿ.ದೇವರಾಜು ಅರಸು ಇವರ ಹೆಸರಿನ 4 ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿದ್ದು, ಪ್ರತಿ ವಸತಿ ಶಾಲೆಯಲ್ಲಿ ಪ್ರತಿ ತರಗತಿಗೆ 60 ವಿದ್ಯಾರ್ಥಿಗಳ ದಾಖಲಾತಿಗೆ ಸೀಟು ಹಂಚಿಕೆ ಮಾಡಿ ಕ್ರಮವಹಿಸಲಾಗಿದೆ. ಪ್ರಸ್ತುತ ಒಟ್ಟು 4,539 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆ. ವಸತಿ ಶಾಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಕಇ 205 ಎಂಡಿಎಸ್ 2025

(ಡಾ.ಹೆಚ್.ಸಿ ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು.